ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ, ದಿನಾಂಕ ೬ನೇ ಜೂನ್ ೧೯೯೦, ಜ್ಯೇಷ್ಠ ೧೬, ೧೯೧೨ ಶಕ.

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೧೦ ಗಂಟೆಗೆ ಸಮಾವೇಶಗೊಂಡಿತು.

[ಉಪಾಧ್ಯಕ್ಷರು (ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ) ಪೀಠವನ್ನು ಅಲಂಕರಿಸಿದರು]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಉಪಾಧ್ಯಕ್ಷರು.—ಮಾನ್ಯ ಸದಸ್ಯರಾದ ಕಮರುಲ್ ಇಸ್ಲಾಂರವರು ಮತ್ತು ಶ್ರೀ ಎಂ. ರಾಮಪ್ಪನವರು ಈಗ ಗೈರು ಹಾಜರಾಗಿದ್ದಾರೆ.

ಆರೋಗ್ಯ ಇಲಾಖೆಯ ವಾಹನಗಳ ದುರಸ್ತಿ

೧೩೭. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿರುವ ವಾಹನಗಳ ಸಂಖ್ಯೆ ಎಷ್ಟು ?

೨) ಈ ವಾಹನಗಳ ಪೈಕಿ ಎಷ್ಟು ವಾಹನಗಳು ಚಲಾವಣೆಯ ಸ್ಥಿತಿಯಲ್ಲಿವೆ ?

೩) ಚಲಾವಣೆಯಲ್ಲಿಲ್ಲದೆ ಇರುವ ವಾಹನಗಳನ್ನು ದುರಸ್ತಿ ಮಾಡಿಸುವ ಕೆಲಸ ಎಲ್ಲಿ ನಡೆಯುತ್ತಿದೆ ?

೪) ಹಳೆಯದಾದ ಹಾಗೂ ಉಪಯೋಗಕ್ಕೆ ಬಾರದ (ಕಂಡೆಮ್ಡ್) ವಾಹನಗಳನ್ನು ವಿಲೇವಾರಿ ಮಾಡಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೇ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

೧) ೧೫೫೫

೨) ೧೨೦೫

೩) ಸಂಬಂಧಪಟ್ಟ ಜಿಲ್ಲಾ ಪರಿಷತ್ತಿನ ವಾಹನಗಳನ್ನು ಆಯಾಯಾ ಜಿಲ್ಲೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ದುರಸ್ತಿ ಮಾಡಿಸುತ್ತಾರೆ. (ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಬೆಂಗಳೂರು ನಗರ ಜಿಲ್ಲೆ ಬಿಟ್ಟು) ಉಳಿದ ವಾಹನಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣಕ್ಕೆ ಸೇರಿದ (ಬೆಂಗಳೂರು ನಗರ ಜಿಲ್ಲೆಗೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ ವಾಹನಗಳನ್ನು) ಇಲಾಖೆಗೆ ಸೇರಿದ ಕೇಂದ್ರೀಯ ಕಾರ್ಯಾಗಾರದ ರಾಜ್ಯ ಆರೋಗ್ಯ ಸಂಸ್ಥೆ ಮಾಗಡಿ ರಸ್ತೆ, ಬೆಂಗಳೂರು ಇಲ್ಲಿ ದುರಸ್ತಿ ಮಾಡಿಸಲಾಗುತ್ತಿದೆ.

೪) ಹಾದು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಆರೋಗ್ಯ ಸಚಿವೆಯವರು ಹಳೆಯ ವಾಹನಗಳನ್ನು ವಿಲೇವಾರಿ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಕಳೆದ ಆರು ವರ್ಷಗಳಲ್ಲಿ ಇಲ್ಲವೇ ಕಳೆದ ಎರಡು ವರ್ಷಗಳಲ್ಲಿ ಎಷ್ಟು ವಾಹನಗಳನ್ನು ವಿಲೇವಾರಿ ಮಾಡಿದ್ದಾರೆಂದು ದಯವಿಟ್ಟು ಸಭೆಗೆ ತಿಳಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಕೇಳುತ್ತೇನೆ ?

ಶ್ರೀಮತಿ ಮನೋರಮಾ ಮಧ್ವರಾಜ್. ಆ ಮಾಹಿತಿ ನನ್ನಲ್ಲಿ ಸಧ್ಯಕ್ಕೆ ಇಲ್ಲ ನಾನು ತರಿಸಿಕೊಡುತ್ತೇನೆ

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಈ ಪ್ರಶ್ನೆಯನ್ನು ಏತಕ್ಕೆ ಕೇಳಿದ್ದೇನೆಂದರೆ ತಾವು ಈ ಇಲಾಖೆಯ ಹೊಣೆಗಾರಿಕೆಯನ್ನು ಹೊತ್ತು ಆರು ತಿಂಗಳಾಗಿದೆ. ತಾವು ಈ ಬಗ್ಗೆ ದೊಡ್ಡ ತಪ್ಪು ಮಾಡಿದ್ದೀರಿ ಎಂದು ಹೇಳುವುದಕ್ಕೆ ನಾನು ಬಯಸುವುದಿಲ್ಲ. ರಾಜ್ಯದ ೨೦ ಜಿಲ್ಲೆಗಳಲ್ಲಿರತಕ್ಕ ಜಿಲ್ಲಾ ಆರೋಗ್ಯ ಅಧಿಕಾರಿಗಳು ತಮ್ಮ ಕಚೇರಿಗಳ ಮುಂದೆ ೧೫–೨೦ ವರ್ಷಗಳಿಂದ ಕಂಡೆಮ್ನ್ ಆಗಿರತಕ್ಕ ವಾಹನಗಳನ್ನು ನಿಲ್ಲಿಸಿದ್ದಾರೆ. ಜಿಲ್ಲಾ ಆರೋಗ್ಯ ಅಧಿಕಾರಿಗಳನ್ನು ಏತಕ್ಕೆ ೨೫–೩೦ ವರ್ಷಗಳಿಂದ ವಾಹನಗಳನ್ನು ನಿಲ್ಲಿಸಿಕೊಂಡಿದ್ದೀರಿ ಅಂದರೆ ಆರ್ ಟಿ.ಓ. ಅವರು ವಾಹನ ಕಂಡಮ್ನ್ ಆಗಿದೆಯೆಂದು ಸರ್ಟಿಫಿಕೇಟ್ ಮಾಡಬೇಕು. ಆಮೇಲೆ ನಾವು ಅವುಗಳನ್ನು ವಿಲೇವಾರಿ ಮಾಡಬೇಕೆಂದು ಹೇಳುತ್ತಾರೆ. ಈ ವಾಹನಗಳು ಕೇಂದ್ರ ಸರ್ಕಾರದ ಬೇರೆ ಬೇರೆ ಸ್ಕೀಮ್‌ಗಳಿಂದ ಬಂದಿವೆ. ನಾನು ಆರೋಗ್ಯ ಸಚಿವನಾಗಿದ್ದಾಗ ಇವುಗಳನ್ನು ಹರಾಜು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೆ, ನಾನು ೧೬ ತಿಂಗಳುಗಳ ಕಾಲ ಮಾತ್ರ ಆರೋಗ್ಯ ಮಂತ್ರಿಯಾಗಿ ಕೆಲಸ ಮಾಡಿದೆ. ಆ ಸಮಯದಲ್ಲಿ ಮಾಡುವುದಕ್ಕೆ ಆಗಲಿಲ್ಲ. ಈಗಲಾದರೂ ತಾವು ೧೦ ವರ್ಷ ಅಥವಾ ೨೦ ವರ್ಷಗಳಲ್ಲಿ ಎಲ್ಲ ಕಂಡೆಮ್ನ್ ಆಗಿರತಕ್ಕ ವಾಹನಗಳನ್ನು ವಿಲೇವಾರಿ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ತಿಳಿಸುತ್ತೀರಾ ? ಎರಡನೆಯೆದಾಗಿ, ಮಾಗಡಿ ರಸ್ತೆಯಲ್ಲಿರುವ ವರ್ಕ್‌ಶಾಪ್‌ನಲ್ಲಿ ಕೆಲಸ ಆಗುತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಜಿಲ್ಲಾ ಪರಿಷತ್‌ನವರ ವ್ಯಾಪ್ತಿಗೆ ಎಲ್ಲ ವಾಹನಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದರ ಅಗತ್ಯ ಇದೆಯೇ ಅಥವಾ ಇಲ್ಲವೋ ಎಂಬುದನ್ನು ತಾವು ತಿಳಿಸಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.—ಕಂಡೆಮ್ನ್ ಆಗಿರತಕ್ಕ ವಾಹನಗಳನ್ನು ಒಂದು ವರ್ಷ ಅಥವಾ ೬ ತಿಂಗಳಲ್ಲಿ ಡಿಸ್‌ಪೋಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾಗಡಿ ರಸ್ತೆಯಲ್ಲಿರುವ ಕೇಂದ್ರೀಯ ಕಾರ್ಯಾಗಾರದ ರಾಜ್ಯ ಆರೋಗ್ಯ ಸಂಸ್ಥೆಯಲ್ಲಿ ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆ ಬಿಟ್ಟು ಉಳಿದ ಎಲ್ಲ ವಾಹನಗಳನ್ನು ಅಲ್ಲಿ ರಿಪೇರಿ ಮಾಡಿಸಲಾಗುತ್ತಿದೆ. ಅದರ ಅಗತ್ಯತೆ ಉಂಟು.

ಶ್ರೀಮಂತಿ ದಮಯಂತಿ ಬೋರೇಗೌಡ.—ಎಲ್ಲ ವಾಹನಗಳನ್ನು ನಿಲ್ಲಿಸುವುದಕ್ಕೆ ಸರಿಯಾದ ಶೆಲ್ಟರ್ ಇಲ್ಲದೇ ಇರುವುದರಿಂದ ಅವು ಜಾಗ್ರತೆ ದುರಸ್ತಿಗೆ ಬರುತ್ತವೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀಮತಿ ಮನೋರಮಾ ಮಧ್ವರಾಜ್.—ಎಲ್ಲ ವಾಹನಗಳಿಗೆ ಶೆಲ್ಟರ್ ಒದಗಿಸುವುದಕ್ಕೆ ಸಾಧ್ಯವಿಲ್ಲ. ಜಿಲ್ಲಾ ಪರಿಷತ್‌ನವರು ಹೆಚ್ಚು ವಾಹನಗಳನ್ನು ಇಟ್ಟುಕೊಂಡಿರುತ್ತಾರೆ. ಅವರು ಈ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡು ಸರ್ಕಾರಕ್ಕೆ ತಿಳಿಸಿದರೆ ನಾವು ಏನಾದರೂ ಒಂದು ವ್ಯವಸ್ಥೆ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್.—ತಾವು ಆರೋಗ್ಯ ಸಚಿವರಾದ ಮೇಲೆ ಇಲಾಖೆಯ ವಾಹನಗಳಿಗೆ ಅನಾರೋಗ್ಯ ಬಂದಿದೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

(ಉತ್ತರವಿಲ್ಲ)

ಆರೋಗ್ಯ ಇಲಾಖೆಯವರಿಂದ ವಿಡಿಯೋ ಎಂಡೋ ಸೋಪ್ಸ್ ಉಪಕರಣಗಳ ಖರೀದಿ

೬೫. ಶ್ರೀ ರಾಮಲಿಂಗ ರೆಡ್ಡಿ (ಜಯನಗರ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆರೋಗ್ಯ ಇಲಾಖೆಯಲ್ಲಿ ವೀಡಿಯೋ ಎಂ ಡೋಸ್ಕೋಪ್ ಉಪಕರಣಗಳನ್ನು ಖರೀದಿಸುವಲ್ಲಿ ದುರುಪಯೋಗ ಆಗಿದೆಯೆಂದು ಆಪಾದಿಸಲಾಗಿದೆ. ಈ ವಿಷಯದ ಬಗ್ಗೆ ತನಿಖೆ ನಡೆಸಲು ಯಾವುದಾದರೂ ಸಮಿತಿಯನ್ನು ರಚಿಸಲಾಗಿದೆಯೇ?